# ಪ್ರಾಚೀನ ಕಲ್ಲಿನ ಮೋರಿ

ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಇಂಚಗೇರಿ ಬಳಿ ಬ್ರಿಟಿಷರ ಕಾಲದಲ್ಲಿ ಕಟ್ಟಿದ ಕಲ್ಲಿನ ಮೋರಿ ಇನ್ನೂ ಸುಸ್ಥಿತಿಯಲ್ಲಿದೆ. ಮಹಾವೀರನಗರ (ಕೆರೆ) ತಾಂಡಾ ಬಳಿ ಕೆರೆಯ ನೀರು ಹೋಗಲು ಸುಮಾರು 120 ವರ್ಷಗಳ ಹಿಂದೆ ಇದನ್ನು ಕಟ್ಟಲಾಗಿದೆ. ಇದಕ್ಕಾಗಿ ಬಳಸಿದ ಪೈಪನ್ನು ಸುಣ್ಣ–ಉಸುಕು ಮಿಶ್ರಣದಿಂದ ತಯಾರಿಸಲಾಗಿದೆ. ಲಭ್ಯವಿರುವ ವಿವರಗಳ ಪ್ರಕಾರ ಎತ್ತುಗಳ ಸಹಾಯದಿಂದ ಗಚ್ಚಿನ ಗಾಣದಿಂದ ಇದನ್ನು ತಯಾರಿಸಲಾಗಿದೆಯಂತೆ.

**ಚಿತ್ರ-ಬರಹ: ಕೆ.ಎಸ್.ಈಸರಗೊಂಡ,**
**ವಿಜಯಪುರ**





# ಬಸವ ತೀರ್ಥ

ಬಸವನಬಾಗೇವಾಡಿಯಲ್ಲಿ ಐತಿಹಾಸಿಕ ದೇವಸ್ಥಾನದ ಪೂರ್ವ ಭಾಗದಲ್ಲಿರುವ ಬಸವ ತೀರ್ಥ ಬಾವಿಯು ಮೊದಲು ಒಂದು ದೊಡ್ಡ ಹೊಂಡವಾಗಿತ್ತು. ಈ ಹೊಂಡದಲ್ಲಿ ಕೃಷ್ಣನೆಂಬ ಬಾಲಕ ಬಿದ್ದಾಗ, 12ನೇ ಶತಮಾನದ ವಿಶ್ವಗುರು ಬಾಲಕ ಬಸವಣ್ಣನು ಹೊಂಡಕ್ಕೆ  ಜಿಗಿದು ಆ ಬಾಲಕನನ್ನು ಬದುಕಿಸಿದನಂತೆ ಎಂಬ ಪ್ರತೀತಿ ಇದೆ. ಹೀಗಾಗಿ ಈ ಬಾವಿಗೆ ಬಸವ ತೀರ್ಥ ಎಂದು ಹೆಸರು ಬಂದಿದೆ. ಗಂಗಾ ಪೂಜೆ ಹಾಗೂ ಗಣೇಶನ ವಿಸರ್ಜನೆಗೆ ಈಗ ಉಪಯೋಗವಾಗುತ್ತಿದೆ.

**-ಗುರುರಾಜ ಬ.ಕನ್ನೂರ,**
**ಬಸವನ ಬಾಗೇವಾಡಿ**

# ಕಾಳು ಮೆಣಸಿನ ಹಾರ!

ಈ ಹಾರವನ್ನು ಕಾಳು ಮೆಣಸಿನ ಕಪ್ಪು ಕಾಳು ಹಾಗೂ ಬಿಳಿ ಕಾಳನ್ನು ಸೇರಿಸಿಕೊಂಡು ಸಿದ್ಧಪಡಿಸಲಾಗಿದೆ. ಈ ವಿನೂತನವಾದ ಮೆಣಸಿನ ಹಾರವನ್ನು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಚವತ್ತಿ– ಹೊಸ್ಮನೆಯ ಕಾಳು ಮೆಣಸಿನ ಬೆಳೆಗಾರರಾದ ಶ್ರೀಧರ ಭಟ್ ಅವರ ಮಾರ್ಗದರ್ಶನದಲ್ಲಿ ಬಾಳೇಹಳ್ಳಿಯ ಗೃಹಿಣಿ ಶ್ವೇತಾ ಕುಲಕರ್ಣಿ ಅರಳಿಸಿದ್ದು ವಿಶೇಷ! ಕೇವಲ ಔಷಧಿ, ಅಡುಗೆಗೆ ಮಾತ್ರವೇ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗ ಆಗುತ್ತಿರುವ ಈ ಕಪ್ಪು ಬಂಗಾರದಿಂದ ಜನಸಾಮಾನ್ಯರನ್ನು ಆಕರ್ಷಿಸುವ ಹಾರವನ್ನು ತಯಾರಿಸಬಹುದು ಎಂಬುದನ್ನು ಶ್ವೇತಾ ಕುಲಕರ್ಣಿ ತೋರಿಸಿಕೊಟ್ಟಿದ್ದಾರೆ.

**ಚಿತ್ರ-ಬರಹ: ಗಣಪತಿ ಹಾಸ್ಪುರ, ಯಲ್ಲಾಪುರ**

